<u>ದಿನಾಂಕ ಃ 04-04-2017 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲು ಃ ಶ್ರೀ ಎಮ್‌ಎಚ್‌ಕೆ ವಕೀಲರಿಂದ ಃ</u>

ಗೇಮಪ್ಪ ರಾಮಪ್ಪ ಲಮಾಣಿ ನಮಗೆ ಅಜ್ಜನಾಗಬೇಕು. ಸದರಿ ಗೇಮಪ್ಪನಿಗೆ 1. ದ್ಯಾಮವ್ವ 2. ಹೇಮವ್ವ ಉರ್ಫ್ ತುಳಚವ್ವ 3. ಹನುಮವ್ವ ಎನ್ನುವ ಮೂರು ಜನ ಹೆಣ್ಣು ಮಕ್ಕಳು ಅಂದರೆ ಸುಳ್ಳು. ಸಾಕ್ಷಿ ಸ್ವಃಇಚ್ಛೆಯಿಂದ ಇಬ್ಬರು ಹೆಣ್ಣುಮಕ್ಕಳು ಮಾತ್ರ ಇದ್ದು ಅವರು 1. ದ್ಯಾಮವ್ವ ಮತ್ತು 2. ಹನುಮವ್ವ ಮಾತ್ರ ಇರುತ್ತಾರೆ ಎಂದು ಹೇಳಿರುತ್ತಾರೆ. ಸದರಿ ಗೇಮಪ್ಪ ನಮ್ಮ ತಂದೆಯ ತಂದೆ ಇರುತ್ತಾರೆ. ಗೇಮಪ್ಪ ನಮ್ಮ ತಂದೆಯ ತಂದೆ ಇರುವುದಿಲ್ಲ ಅಂದರೆ, ಹಾಗೂ ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗೇಮಪ್ಪನಿಗೆ 3 ಜನ ಹೆಣ್ಣುಮಕ್ಕಳು ಇದ್ದರೂ ಸಹ ಕೇವಲ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ 24 ರ ದಾಖಲೆಯ ಎಡಭಾಗದ ಕೆಳಭಾಗದಲ್ಲಿ ಶಂಕ್ರಪ್ಪ ಲಮಾಣಿ ಎಂದು ಬರೆದು ಸಹಿ ಮಾಡಲ್ಪಟ್ಟಿದ್ದು ನಮ್ಮ ಅಣ್ಣನ ಸಹಿ ಎಂದರೆ ಸರಿ. ನಿಪಿ 24 ರ ದಾಖಲೆಯಲ್ಲಿ ಬರೆದ ವಂಶಾವಳಿಯನ್ನು ನಾವು ಒಪ್ಪಿಕೊಂಡು ಸಹಿ ಮಾಡಿ ಸಲ್ಲಿಸಿದ ದಾಖಲೆ ಇರುತ್ತದೆ ಅಂದರೆ ಸರಿಯಲ್ಲ. ನನಗೆ ಓದಲು ಬರುವುದಿಲ್ಲ. ನಿಪಿ 24 ರ ದಾಖಲೆಯು ಸರಿ ಇರುವುದಿಲ್ಲ. ನಮ್ಮ ತಂದೆಗೆ ದ್ಯಾಮಪ್ಪ ಮತ್ತು ದೇಮಪ್ಪ ಎಂಬ ಎರಡು ಹೆಸರು ಇರುತ್ತವೆ ಅಂದರೆ ಸರಿ. ನಮ್ಮ ತಂದೆಯ ಜನಕ ತಂದೆ ತಾಯಿಗಳ ಬಗ್ಗೆ ಹೇಳಲು ನಮ್ಮ ತಂದೆ ಮಾತ್ರ ಶಕ್ತರು ಎಂದರೆ ಸರಿ. ನಮ್ಮ ತಂದೆಯ ಜನಕ ತಂದೆ ತಾಯಿಗಳ ಬಗ್ಗೆ ನನಗಾಗಲಿ ನನ್ನ ಅಣ್ಣನಿಗಾಗಲಿ ಯಾವುದೇ ಮಾಹಿತಿ ಇರುವುದಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆ 1 ನೇ ಪ್ರತಿವಾದಿ ಸಾಕ್ಷ ಹೇಳಲು ನ್ಯಾಯಾಲಯಕ್ಕೆ ಬರಲು ಶಕ್ತರಾಗಿದ್ದಾರೆ ಅಂದರೆ ಸುಳ್ಳು. ಸಾಕ್ಷಿ ಸ್ವಃಇಚ್ಛೆಯಿಂದ ತಮ್ಮ ತಂದೆಗೆ ಪಾರ್ಶ್ವವಾಯು ಆಗಿರುತ್ತದೆ ಎಂದು ಹೇಳಿರುತ್ತಾರೆ. ನಮ್ಮ ತಂದೆಗೆ ಪಾರ್ಶ್ವವಾಯು ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ವಕೀಲರು ಸಾಕ್ಷಿಗೆ ನಿಮ್ಮ ತಂದೆಗೆ ನ್ಯಾಯಾಲಯಕ್ಕೆ ಕರೆದುಕೊಂಡು ಬರಲು ನಿಮಗೆ ಆಗುತ್ತದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿಯು ಅವರಿಗೆ ಪಾರ್ಶ್ವವಾಯು ಆಗಿರುತ್ತದೆಂದು ಹಾಗೂ

ತಮ್ಮ ತಂದೆಗೆ ಕರೆದುಕೊಂಡು ಬರಲು ಹೇಳಿದರೆ ತಾವು ಕರೆದುಕೊಂಡು ಬರುತ್ತೇವೆಂದು ಹೇಳಿರುತ್ತಾರೆ.

ವಕೀಲರು ಮುಂದಿನ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ. ನ್ಯಾಯಾಲಯ, ಬ್ಯಾಡಗಿ.